# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ–10606/2019/ಡಿ.ಆರ್.ಇ–2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 18/02/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ನ್ಯಾಯೋಚಿತವಾಗಿ ದೂರುದಾರರ ಗಂಡನಿಗೆ ಬರಬೇಕಾಗಿರುವ ಬಾಕಿ ವೇತನ ರೂ.1,72,920/– ಅಥವಾ ಅದಕ್ಕೂ ಹೆಚ್ಚಿಗೆ ಯಾವುದು ಸರಿಯಾಗಿ ಇರುವುದೋ ಅದನ್ನು ಲೆಕ್ಕ ಹಾಕಿ ತ್ವರಿತವಾಗಿ ಅವರಿಗೆ ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀಮತಿ ಶಾಂತಕುಮಾರಿ ಕೋಂ ಟಿ.ಹೆಚ್.ಗಿರಿಮೊಜಿರಾವ್, ನಿವೃತ್ತ ಪ್ರೌಢ ಶಾಲಾ ಶಿಕ್ಷಕರು, ಹೊಳವನಹಳ್ಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ ಎಲ್.ಕಾಮಯ್ಯ, ಮುಖ್ಯ ಶಿಕ್ಷಕರು, ಬಾಲಕರ ಸರ್ಕಾರಿ ಪ್ರೌಢ ಶಾಲೆ, ಹೊಳವನಹಳ್ಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತನ್ನ ಗಂಡ ಶ್ರೀ ಟಿ.ಹೆಚ್.ಗಿರಿಮೊಜಿರಾವ್, ಸರ್ಕಾರಿ ಪ್ರೌಢ ಶಾಲೆ ಶಿಕ್ಷಕರು, ಹೊಳವನಹಳ್ಳಿ, ಕೊರಟಗೆರೆ ತಾಲ್ಲೂಕು ನಿವೃತ್ತಿಯಾಗಿ 11 ವರ್ಷಗಳಾಗಿದ್ದು ಇವರಿಗೆ ಫೆಬ್ರವರಿ 1997ರಿಂದ 28/02/2008 ರವರೆಗಿನ ಅವಧಿಯ ವೇತನ ಬಾಕಿ ಮೊಬಲಗು ರೂ.1,53,420/– ಗಳಿಕೆ ರಜೆಯ ವ್ಯತ್ಯಾಸದ ಬಾಕಿ ಮೊಬಲಗು ರೂ.19,500/– ಮಹಾಲೇಖಪಾಲರು, ಬೆಂಗಳೂರು

ಇವರಿಂದ ಮಂಜೂರಾಗಿ 21 ತಿಂಗಳು ಕಳೆದರೂ ಸಹಿತ ಎದುರುದಾರರು ಸದರಿ ಆದೇಶದಂತೆ ನಗದೀಕರಣಕ್ಕಾಗಿ ಕ್ರಮ ಕೈಗೊಳ್ಳದೇ ಸತಾಯಿಸುತ್ತಿದ್ದಾರೆ. ಆದ್ದರಿಂದ, ತಮಗೆ ನ್ಯಾಯ ಕೊಡಿಸಬೇಕೆಂದು ಕೋರಿದ್ದಾರೆ.

3. ದೂರುದಾರರು ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿದೆ. ದಿನಾಂಕ: 16/05/2017 ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಇಲಾಖೆ, ತುಮಕೂರು ಉತ್ತರ, ಮಧುಗಿರಿ ಸಂಖ್ಯೆ: ಸಿ2/ಕನ್ನಡ ಭಾಷೆ/256/2016–17, ದಿನಾಂಕ: 16/05/2017ರ ಜ್ಞಾಪನವನ್ನು ಪರಿಶೀಲಿಸಿದಾಗ, ಶ್ರೀ ಟಿ.ಹೆಚ್.ಗಿರಿಮೋಜಿರಾವ್, ನಿವೃತ್ತ ಸಹ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ರವರಿಗೆ ಕನ್ನಡ ಭಾಷಾ ವಿಶೇಷ ಬಡ್ತಿ ಹಾಗೂ ಗ್ರೇಡ್–1 ಬಡ್ತಿ ಮಂಜೂರಾತಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ಪತ್ರ ಸಂಖ್ಯೆ: ಇ1/ಪ್ರಾ.ಶಾ.ಸಿ.ವರ್ಗ–01/2016–17, ದಿನಾಂಕ: 21/02/2017 ರಂದು ಮಂಜೂರಾತಿಗೆ ಶಿಫಾರಸ್ಸು ಮಾಡಿರುತ್ತಾರೆ, ಅವರಿಗೆ ಸಂಬಂಧಪಟ್ಟ ದಾಖಲೆಗಳನ್ನು ಮಹಾಲೇಖಪಾಲಕರು, ವೇತನ ನಿಗಧಿಯನ್ನು ಒಪ್ಪಿ ಪಿಂಚಣಿ ಪರಿಷ್ಕರಿಸಿದ ನಂತರ ಬಾಕಿ ವೇತನ ಸೆಳೆಯುವ ಷರತ್ತಿಗೆ ಒಳಪಟ್ಟು ಅವರಿಗೆ ಕನ್ನಡ ಭಾಷಾ ವಿಶೇಷ ಬಡ್ತಿ ಮತ್ತು ಗ್ರೇಡ್–1 ಬಡ್ತಿ ಮಂಜೂರಾತಿ ನೀಡಿದೆ ಎಂದು ಉಲ್ಲೇಖಿಸಲಾಗಿದೆ.

4. ದಿನಾಂಕ: 26/02/2018ರ ಮಹಾಲೇಖಪಾಲಕರು ಎದುರುದಾರರಿಗೆ ಕಳುಹಿಸಿರುವ ದಾಖಲೆ, ದಿನಾಂಕ: 26/04/2019 ರಂದು ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಎದುರುದಾರರಿಗೆ ಟಿ.ಹೆಚ್.ಗಿರಿಮೋಜಿರಾವ್, ನಿವೃತ್ತ ಸಹ ಶಿಕ್ಷಕರಿಗೆ ಎಲ್ಲಾ ಆರ್ಥಿಕ ಸವಲತ್ತುಗಳನ್ನು ನೀಡಿ ಮಹಾಲೇಖಪಾಲಕರು 26/02/2018 ರಂದು ಆದೇಶಿಸಿದ್ದರೂ ಸಹಿತ, ಈವರೆವಿಗೂ ಸದರಿ ಶಿಕ್ಷಕರಿಗೆ ಬಾಕಿ ವೇತನ ನೀಡದೇ ಇರುವುದು ತುಂಬಾ ವಿಷಾದನೀಯ ಸಂಗತಿಯಾಗಿದೆ. ಸದರಿ ಪತ್ರದ ಉಲ್ಲೇಖ–2 ರಂತೆ ವಿಳಂಬಕ್ಕೆ ಅವಕಾಶ ನೀಡದೇ ಮುಖ್ಯ ಶಿಕ್ಷಕರೇ ಬಟವಾಡೆ ಅಧಿಕಾರಿಯಾಗಿರುವುದರಿಂದ ತಮ್ಮ ಹಂತದಲ್ಲಿಯೇ ಕ್ರಮ ಕೈಗೊಂಡು ಬಾಕಿ ವೇತನವನ್ನು ಬಿಡುಗಡೆ ಮಾಡುವಂತೆ ಮುಖ್ಯ ಶಿಕ್ಷಕರಿಗೆ ತಿಳಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದಿನಾಂಕ: 26/04/2019 ರಂದು ಪತ್ರ ಬರೆದಿದ್ದಾರೆ.

5. ಅದರ ಅನ್ವಯ ದಿನಾಂಕ: 14/05/2019 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಎದುರುದಾರರಿಗೆ ಟಿ.ಹೆಚ್.ಮೋಜಿರಾವ್, ನಿವೃತ್ತ ಸಹ ಶಿಕ್ಷಕರು ಇವರಿಗೆ ಮಹಾಲೇಖಪಾಲರು, ಬೆಂಗಳೂರು ರವರ ಆದೇಶ ಸಂಖ್ಯೆ: PV9/2/1517193665/2500202204/3, dated 26/02/2018 ರಲ್ಲಿ ಆದೇಶ ನೀಡಿ ಪಿಂಚಣಿ ಮಂಜೂರು ಮಾಡಿರುವುದರಿಂದ ಸದರಿ ಶಿಕ್ಷಕರಿಗೆ ಬಾಕಿ ವೇತನವನ್ನು ಬಿಡುಗಡೆ ಮಾಡಲು ತಿಳಿಸಿದೆ, ತಪ್ಪಿದಲ್ಲಿ ಮುಂದೆ ಹಾಗು ಹೋಗುಗಳಿಗೆ ನೀವೇ ನೇರ ಹೊಣೆಗಾರರಾಗುತ್ತೀರೆಂದು ಉಲ್ಲೇಖಿಸಿದ್ದಾರೆ.

6. ಲಭ್ಯವಿರುವ ಎಲ್ಲಾ ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡುಬರುವುದೇನೆಂದರೆ, ಮಹಾಲೇಖಪಾಲರು, ಬೆಂಗಳೂರು ರವರ ಆದೇಶ ಸಂಖ್ಯೆ: PV9/2/1517193665/ 2500202204/3, dated 26/02/2018 ರಲ್ಲಿ ಆದೇಶ ನೀಡಿ ಪಿಂಚಣಿ ಮಂಜೂರು ಮಾಡಿರುವುದರಿಂದ ಮತ್ತು ಸದರಿ ಬಾಕಿ ವೇತನವನ್ನು ಬಿಡುಗಡೆ ಮಾಡುವಂತೆ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎದುರುದಾರರಿಗೆ ಆದೇಶಿಸಿ, ತಪ್ಪಿದಲ್ಲಿ ಮುಂದೆ ಹಾಗು ಹೋಗುಗಳಿಗೆ ನೀವೇ ನೇರ ಹೊಣೆಗಾರರಾಗುತ್ತೀರೆಂದು ಎಚ್ಚರಿಕೆ ನೀಡಿದ್ದರೂ ಸಹಿತ, ದೂರುದಾರರ ಗಂಡ ಟಿ.ಹೆಚ್.ಗಿರಿಮೋಜಿರಾವ ಇವರಿಗೆ ಸಿಗಬೇಕಾದ ಬಾಕಿ ಹಣಕಾಸಿನ ಸೌಲಭ್ಯವನ್ನು ಒದಗಿಸುವಲ್ಲಿ ಎದುರುದಾರರು ವಿಳಂಬ ಮಾಡುತ್ತಿದ್ದಾರೆ ಎಂಬುದು ಕಂಡುಬರುತ್ತದೆ ಎಂದು ಎದುರುದಾರರ ಆಕ್ಷೇಪಣೆಯಲ್ಲಿ ಕೋರಲಾಗಿತ್ತು.

7. ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ ಜನವರಿ–2019ರ ಮೊದಲನೆ ವಾರದಲ್ಲಿ ತನಗೆ ಬರಬೇಕಾದ ಗ್ರೇಡ್–1 ಮತ್ತು ಕನ್ನಡ ಭಾಷೆ ವಿನಾಯ್ತಿ ಬಾಕಿ ಮೊತ್ತ ಬಿಲ್ ಮಾಡಿಕೊಡಲು ಮೌಖಿಕವಾಗಿ ಕೋರಿದ್ದರು, ತಾನು ಕಡತ ಪರಿಶೀಲಿಸಿದಾಗ ಗೊಂದಲ ಉಂಟಾಗಿದ್ದರಿಂದ, ದಿನಾಂಕ: 11/01/2019 ರಂದು ಸ್ಪಷ್ಟೀಕರಣ ಕೋರಿ ಉಪ ನಿರ್ದೇಶಕರ ಕಛೇರಿ, ಮಧುಗಿರಿ ರವರಿಗೆ ಪತ್ರ ಬರೆದೆ, ಕೊರಟಗೆರೆ ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿಯಿಂದ ಬಂದ ದೂರವಾಣಿ ಕರೆಯ ಮೇರೆಗೆ ದಿನಾಂಕ: 27/02/2019 ರಂದು ಸದರಿ ನೌಕರರ ಸೇವಾ ಪುಸ್ತಕವನ್ನು ಲಿಖಿತ ಪತ್ರದೊಂದಿಗೆ ಸಲ್ಲಿಸಲಾಯಿತು. ದಿನಾಂಕ: 26/04/2019 ರಂದು ಬಾಕಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ರವರಿಗೆ ಮಧುಗಿರಿ ಉಪ ನಿರ್ದೇಶಕರು ನಿರ್ದೇಶನ ನೀಡಿ ಆದೇಶ ಮಾಡಿದ್ದರು.

8. ದಿನಾಂಕ: 14/05/2019 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ತನಗೆ ಸದರಿ ನೌಕರರಿಗೆ ಬಾಕಿ ವೇತನ ಪಾವತಿ ಮಾಡಲು ಆದೇಶ ಮಾಡಿದ್ದರು, ತಾನು ಬಿಲ್ಲನ್ನು ಸಿದ್ಧಪಡಿಸಿಕೊಂಡು ವಂಟನದ ಅವಶ್ಯಕತೆ ಇರುವುದರಿಂದ ದಿನಾಂಕ: 04/07/2019 ರಂದು ವಂಟನ ಬಿಡುಗಡೆ ಮಾಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ಪತ್ರ ಬರೆಯಲಾಯಿತು. ಇದಾದನಂತರ 31/07/2019 ರಂದು ವಂಟನ ಬಿಡುಗಡೆ ಮಾಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ರವರಿಗೆ ಮತ್ತೊಮ್ಮೆ ಪತ್ರ ಬರೆಯಲಾಯಿತು. ಇದಾದನಂತರ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಆಯವ್ಯಯ/ಅನು/ಬೇ/ವೇ.ಪಾ/2019-20/309223, ದಿನಾಂಕ: 29/08/2019ರ ಪ್ರಕಾರ ವೇತನ ನಿಗಧಿಯಾಗಿರುವ ಅನುದಾನದಲ್ಲಿ ಬಾಕಿ ವೇತನ ಸೆಳೆಯಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಿದ್ದ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರ ಸುತ್ತೋಲೆಯ ಅನ್ವಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ರವರ ಪತ್ರ ಸಂಖ್ಯೆ: ಇ5/ ಸ.ಪ್ರೌ.ಶಾ.ವಂ/04/2019-20, ದಿನಾಂಕ: 07/11/2019 ರಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ವೇತನಕ್ಕೆ ಮಾತ್ರ ಅನುದಾನ ಬಳಸಿಕೊಂಡು ಬಾಕಿ ವೇತನಗಳಿಗೆ ಅನುದಾನ ಬಳಸಿಕೊಳ್ಳಬಾರದೆಂದು ಆದೇಶ ನೀಡಿದ್ದಾರೆ. ಆದರೆ, ಬಾಕಿ ವೇತನ ಪಾವತಿ ಮಾಡಲು ವಂಟನ ಬಿಡುಗಡೆ ಮಾಡಲಿಲ್ಲ, ಈ ಬಗ್ಗೆ ದೂರುದಾರರು ಈ ದೂರನ್ನು ದಾಖಲಿಸಿದ್ದಾರೆ. ಇದಾದನಂತರ ತಾನು ಮತ್ತೊಮ್ಮೆ ರೂ.1,72,920/- ವಂಟನ ಬಿಡುಗಡೆ ಮಾಡುವಂತೆ ಕೋರಿ ದಿನಾಂಕ: 11/11/2019 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ಪತ್ರ ಬರೆಯಲಾಗಿದೆ, ತಾನು ಎರಡು ಬಿಲ್ಲುಗಳನ್ನು ಸಿದ್ಧಪಡಿಸಿಕೊಂಡು ವಂಟನ ಬಿಡುಗಡೆಗಾಗಿ ಕಾಯುತ್ತಾ ಇರುತ್ತೇನೆ, ವಂಟನ ಬಿಡುಗಡೆಯಾದ ತಕ್ಷಣ ಸದರಿಯವರಿಗೆ ಬರಬೇಕಾದ ಬಾಕಿ ವೇತನವನ್ನು ಪಾವತಿ ಮಾಡಲಾಗುವುದು ಅಂತಾ ತಿಳಿಸಿದ್ದಾರೆ.

9. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಉಲ್ಲೇಖಿಸಿದಂತೆ ನಡೆದ ಪತ್ರ ವ್ಯವಹಾರದ ದಾಖಲೆಗಳನ್ನು ಹಾಜರುಪಡಿಸಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ರವರ ಪತ್ರ ಸಂಖ್ಯೆ: ಇ5/ಸ.ಪ್ರೌ.ಶಾ.ವಂ/04/2019-20, ದಿನಾಂಕ: 07/11/2019ನ್ನು ಪರಿಶೀಲಿಸಲಾಗಿ, ಬಿಡುಗಡೆ ಮಾಡಿರುವ ಅನುದಾನದಲ್ಲಿ ವೇತನಕ್ಕೆ ಮಾತ್ರ ಅನುದಾನ ಬಳಸಿಕೊಂಡು ಬಾಕಿ ವೇತನಗಳಿಗೆ ಅನುದಾನ ಬಳಸಿಕೊಳ್ಳಬಾರದು ಮತ್ತು ತಪ್ಪಿದಲ್ಲಿ ಮುಂದಿನ ವೇತನ ಕೊರತೆಗೆ ನೀವೆ ನೇರ ಹೊಣೆಗಾರರಾಗುತ್ತೀರಿ ಅಂತಾ ಜ್ಞಾಪನ ನೀಡಿದ್ದಾರೆ ಎಂಬುದು ಕಂಡುಬರುತ್ತದೆ. ಈ ರೀತಿ

ಜ್ಞಾಪನವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊರಟಗೆರೆ ರವರು ನೀಡಿದ್ದರಿಂದ, ಮತ್ತು ವಂಟನವನ್ನು ಬಿಡುಗಡೆ ಮಾಡದೇ ಇರುವುದರಿಂದ, ದೂರುದಾರರ ಕುಂದುಕೊರತೆಯನ್ನು ನಿವಾರಿಸಲಾಗಿಲ್ಲ ಎಂಬುದು ಆಕ್ಷೇಪಣೆಗಳಿಂದ ಸ್ಪಷ್ಟವಾಗುತ್ತದೆ. ಆದರೆ, ಎದುರುದಾರರು ಕರ್ತವ್ಯ ಲೋಪ ಎಸಗಿದ್ದಾರೆ ಅಂತಾ ಕಂಡುಬರುವುದಿಲ್ಲ. ಬದಲಾಗಿ, ಅವರು ದೂರುದಾರರ ಗಂಡನಿಗೆ ಸಿಗಬೇಕಾದ ಬಾಕಿ ವೇತನವನ್ನು ಒದಗಿಸುವಲ್ಲಿ ಕ್ರಮ ತೆಗೆದುಕೊಂಡಿದ್ದಾರೆ ಅಂತಾ ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ನ್ಯಾಯೋಚಿತವಾಗಿ ದೂರುದಾರರ ಗಂಡನಿಗೆ ಬರಬೇಕಾಗಿರುವ ಬಾಕಿ ವೇತನ ಬರುವಲ್ಲಿ ವಿಳಂಬವಾಗುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಅದು ಅಲ್ಲದೇ ದೂರುದಾರರು ನಿವೃತ್ತಿಯಾಗಿ ಸುಮಾರು 11 ವರ್ಷಗಳಾಗಿದ್ದು, ಹಿರಿಯ ನಾಗರೀಕರಾದ ಅವರು ತಮಗೆ ಬರಬೇಕಾದ ಬಾಕಿ ವೇತನ ಪಡೆಯಲು ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ವ್ಯವಹಾರ ಮಾಡಿ ಅಲೆದಾಡಿದರೂ ಸಹಿತ ಯಾವುದೇ ಸೂಕ್ತ ಕ್ರಮವಾಗಿ ಅವರ ಬಾಕಿ ವೇತನ ಬಿಡುಗಡೆಯಾಗಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ನ್ಯಾಯೋಚಿತವಾಗಿ ದೂರುದಾರರ ಗಂಡನಿಗೆ ಬರಬೇಕಾಗಿರುವ ಬಾಕಿ ವೇತನ ರೂ.1,72,920/- ಅಥವಾ ಅದಕ್ಕೂ ಹೆಚ್ಚಿಗೆ ಯಾವುದು ಸರಿಯಾಗಿ ಇರುವುದೋ ಅದನ್ನು ಲೆಕ್ಕ ಹಾಕಿ ತ್ವರಿತವಾಗಿ ಅವರಿಗೆ ಬಿಡುಗಡೆ ಮಾಡುವಂತೆ ನಿರ್ದೇಶಿಸಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18-2-20

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.